ವಿಷಯ :- ರಾಜ್ಯದಲ್ಲಿ ಕುಷ್ಠರೋಗದ ನಿರ್ಮೂಲನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1024 (2028)

ಶ್ರೀ ಡಿ. ಆರ್. ಪಾಟೀಲ್ (ಗದಗ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕುಷ್ಠರೋಗವನ್ನು 2000 ಇಸವಿಯೊಳಗೆ ಸಂಪೂರ್ಣವಾಗಿ ನಿರ್ಮೂಲನಾ ಮಾಡಲು ಸರ್ಕಾರದವರು ನಿರ್ಧರಿಸಿರುವರೆ ಹಾಗಿದ್ದಲ್ಲಿ, ಅದನ್ನು ಸಾಧಿಸಲು ಕೈಗೊಂಡ ಕ್ರಮಗಳಾವುವು?

ಆ) ರಾಜ್ಯದಲ್ಲಿರುವ ಕುಷ್ಠರೋಗಿಗಳ ಸಮೀಕ್ಷೆ ನಡೆದಿದೆಯೇ, ನಡೆದಿದ್ದರೆ ಅವರುಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

ಇ) ಕುಷ್ಠರೋಗಿಗಳ ಪುನರ್ ವಸತಿಗೆ ಕಳೆದ ಹಣಕಾಸು ವರ್ಷದಲ್ಲಿ ನೀಡ ಲಾಗಿರುವ ಹಣವೆಷ್ಟು?

ಡಾ : ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :-

ಅ) ವಿಶ್ವ ಆರೋಗ್ಯ ಸಂಸ್ಥೆಯವರ ಆದೇಶದ ಪ್ರಕಾರ ಕ್ರಿ.ಶ. 2000 ಇಸವಿಗೆ 10,000 ಜನಸಂಖ್ಯೆಗೆ 1 ಕುಷ್ಠರೋಗಿಗಿಂತ ಕಡಿಮೆ ಇರುವಂತೆ ಮಾಡುವ ಗುರಿ ಇದೆ. ಈ ಕಾರ್ಯಕ್ರಮವು ರಾಜ್ಯದಲ್ಲಿ ಸಹ ಹಮ್ಮಿಕೊಳ್ಳಲಾಗಿದೆ.

ರಾಜ್ಯದಲ್ಲಿ ದಿ. 31-5-1996 ರಲ್ಲಿ 18003 ಕುಷ್ಠರೋಗಿಗಳಿದ್ದು, ಈ ಎಲ್ಲಾ ರೋಗಿಗಳಿಗೆ ಬಹುವಿಧದ ಔಷಧಿಯ ಚಿಕಿತ್ಸೆಯನ್ನು ನೀಡಲಾಗುತ್ತಿದೆ. ಮತ್ತು ಚಿಕಿತ್ಸೆ ನಿಡಿ 6 ತಿಂಗಳುಗಳಿಂದ 24 ತಿಂಗಳಲ್ಲಿ ಈ ರೋಗಿಗಳು ರೋಗದಿಂದ ಸಂಪೂರ್ಣ ವಾಗಿ ಗುಪಡಿಸಲಾಗುತ್ತದೆ. ರಾಜ್ಯದಲ್ಲಿರುವ ಎಲ್ಲಾ ಹಳ್ಳಿಗಳಲ್ಲಿ ನಗರ ಪ್ರದೇಶಗಳಲ್ಲಿ ಶಾಲೆ ಸಮೀಕ್ಷೆ ಮತ್ತು ಗುಂಪು ಸಮೀಕ್ಷಣೆ ಮಾಡಿ ಕುಷ್ಠರೋಗಿಗಳನ್ನು ಕಂಡು ಹಿಡಿದು ಎಲ್ಲಾ ಕುಷ್ಠರೋಗಿಗಳಿಗೆ ಪ್ರತಿಯೊಂದು ಸರ್ಕಾರಿ ಆಸ್ಪತ್ರೆಗಳಲ್ಲಿ ಮತ್ತ ಸ್ವಯಂ ಸೇವಾ ಸಂಸ್ಥೆಗಳಲ್ಲಿ ರಾಷ್ಟ್ರೀಯ ಕುಷ್ಠರೋಗ ಕೇಂದ್ರಗಳಲ್ಲಿ ಉಚಿತವಾಗಿ ರೋಗಿಯ ಮನೆಯ ಬಳಿ ಚಿಕಿತ್ಸೆ ನೀಡುವ ವ್ಯವಸ್ಥೆ ಮಾಡಲಾಗಿದೆ.

ರಾಜ್ಯದಲ್ಲಿ 2 ವರ್ಷಕ್ಕೊಮೆ ಕುಷ್ಠರೋಗದ ಸಮೀಕ್ಷೆ ನಡೆಸುತ್ತಿವೆ.

ಈ ಸಾಲಿನ 1996-97 (ಮೇ ತಿಂಗಳ ಕೊನೆಯವರೆಗೆ) ಸಮೀಕ್ಷೆ ಮಾಡಿದಂತೆ ರಾಜ್ಯದಲ್ಲಿ ಒಟ್ಟು 16,47,111 ಕುಷ್ಠರೋಗಿಗಳಿರುತ್ತಾರೆ. ವಿವರ ಈ ರೀತಿ ಇದೆ.

ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ.

		ಸಮೀಕ್ಷೆ ಮಾಡಿದ ಜನರ ಸಂಖ್ಯೆ (ಪರೀಕ್ಷೆ
1.	ಬೆಂಗಳೂರು ನಗರ	116872
2.	ಬೆಂಗಳೂರು (ಗ್ರಾ)	40054
3.	ಚಿತ್ರದುರ್ಗ	56168
4.	ಕೋಲಾರ	156583
5.	ಶಿವಮೊಗ್ಗ	106081
6.	ತುಮಕೂರು	128726
7.	ಬೆಳಗಾಂ	150900
8.	ಬಿಜಾಪುರ	114681
9.	ಧಾರವಾಡ	138341
10.	ಉತ್ತರ ಕನ್ನಡ	28144
11.	ಬಳ್ಳಾರಿ	99960
12.	ಬೀದರ್	57349
13.	ಗುಲ್ಬರ್ಗಾ	44737
14.	ರಾಯಚೂರು	56642
15.	ಚಿಕ್ಕಮಗಳೂರು	5812
16.	ದಕ್ಷಿಣ ಕನ್ನಡ	38466
17.	ಹಾಸನ	8083
18.	ಕೊಡಗು	23305
19.	ಮಂಡ್ಯ	81558
20.	ಮೈಸೂರು	194640
	ಒಟ್ಟು	1647111

ಇ) ಕುಷ್ಟರೋಗ ಪುನರ್ ವಸತಿಗಾಗಿ 1995-96 ನೇ ಸಾಲಿನಲ್ಲಿ ರೂ. 6,60,087-00 ನೀಡಲಾಗಿದೆ.

ವಿಷಯ :- 1996-97 ನೇ ಶೈಕ್ಷಣಿಕ ವರ್ಷದಲ್ಲಿ ಮಂಜೂರಾದ ಸರ್ಕಾರಿ ಪ್ರೌಢಶಾಲೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1025 (1836)

ಶ್ರೀ ಡಿ. ಆರ್. ಪಾಟೀಲ್ (ಗದಗ) :- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1996-97 ನೇ ಶೈಕ್ಷಣಿಕ ವರ್ಷದಲ್ಲಿ ಮಂಜೂರಾದ ಸರ್ಕಾರಿ ಪ್ರೌಢ ಶಾಲೆಗಳೆಷ್ಟು?

ಆ) ಇವುಗಳಲ್ಲಿ ಕನ್ನಡ ಮಾಧ್ಯಮ ಹಾಗೂ ಉರ್ದು ಮಾಧ್ಯಮದ ಪ್ರೌಢ ಶಾಲೆಗಳೆಷ್ಟು?

ಇ) ಕಡಿಮೆ ಉರ್ದು ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಇರುವ ಕಾರಣಗಳೇನು?

ಈ) ಈ ಅನ್ಯಾಯ ಸರಿಪಡಿಸಲು ಇದೇ ಶೈಕ್ಷಣಿಕ ವರ್ಷದಲ್ಲಿ ಇನ್ನಷ್ಟು ಸರ್ಕಾರಿ ಉರ್ದು ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಉ) ಆದರಲ್ಲಿ ಗದಗ ನಗರಕ್ಕೆ ಒಂದು ಸರಕಾರಿ ಉರ್ದು ಪ್ರೌಢಶಾಲೆಯನ್ನು ಇದೇ ಶೈಕ್ಷಣಿಕ ವರ್ಷದಲ್ಲಿ ಮಂಜೂರು ಮಾಡಲಾಗುವುದೇ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :-

ಅ) 200

ಆ) ಕನ್ನಡ - 182
ಉರ್ದು - 15

ಇ) ಅಗತ್ಯತೆ ಮತ್ತು ಸ್ಥಳೀಯ ಬೇಡಿಕೆಗಳಿಗೆ ಅನುಗುಣವಾಗಿ ಶಾಲೆಗಳನ್ನು ಮಂಜೂರು ಮಾಡಲಾಗಿದೆ.

ಈ) ಯಾವುದೇ ಅನ್ಯಾಯವಾಗಿಲ್ಲದಿರುವುದರಿಂದ, ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಪರಿಶೀಲಿಸಲಾಗುವುದು.